ಪ್ರಾರ್ಥನೆ

16



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಎಲ್ಲಾ ಪ್ರವಾದಿಗಳು ತಮ್ಮ ಜನಸಮುದಾಯಕ್ಕೆ ಪ್ರಪ್ರಥಮವಾಗಿ ಉಪದೇಶ ನೀಡಿದ್ದು ಆರಾಧನೆಗೆ ಅರ್ಹನಾದವನು ಅಲ್ಲಾಹನಾಗಿದ್ದಾನೆ ಎಂಬ ಪವಿತ್ರ ವಚನವನ್ನಾಗಿದೆ. ಆರಾಧನೆಯಲ್ಲಿ ಪ್ರಮುಖವಾದ ಆರಾಧನೆ ಪ್ರಾರ್ಥನೆಯಾಗಿದೆ. ಅಂತ್ಯ ಪ್ರವಾದಿ ಮುಹಮ್ಮದ್(ﷺ) ತಮ್ಮ ಮಕ್ಕಾ ಜೀವನದ ಹದಿಮೂರು ವರ್ಷಗಳಲ್ಲಿಯೂ ತಮ್ಮ ಸಂಗಾತಿಗಳಿಗೆ ಪ್ರಾರ್ಥನೆ ಅಲ್ಲಾಹನೊಂದಿಗೆ ಮಾತ್ರವಾಗಿದೆ ಎಂದು ಉಪದೇಶಿಸಿದ್ದರು. ಈ ಪ್ರಾರ್ಥನೆಯ ಶಿಷ್ಟಾಚಾರಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ಕಾರಣ ಪ್ರಾರ್ಥನೆಯ ಶಿಷ್ಟಾಚಾರಗಳನ್ನು ಪಾಲಿಸಿಕೊಂಡು ಪ್ರಾರ್ಥಿಸಿದರೆ ಮಾತ್ರ ಆ ಪ್ರಾರ್ಥನೆ ಸ್ವೀಕೃತವಾಗುತ್ತದೆ. ಇಲ್ಲವಾದರೆ ಆ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ.

ಪ್ರಾರ್ಥನೆಯ ಶಿಷ್ಟಾಚಾರಗಳು:

ನಾವು ಕೇವಲ ಅಲ್ಲಾಹನನ್ನೇ ಕರೆದು ಪ್ರಾರ್ಥಿಸಬೇಕು. ಅವನ ಹೊರತು ಇನ್ನಾರೊಂದಿಗೂ ನಮ್ಮ ಬಯಕೆಗಳ ಈಡೇರಿಕೆಗಾಗಿ ಪ್ರಾರ್ಥಿಸಬಾರದು. ಪ್ರಾರ್ಥನೆ ಆರಾಧನೆಯ ತಿರುಳಾಗಿದೆ. ಆರಾಧನೆಗೆ ಅರ್ಹನು ಅಲ್ಲಾಹನು ಮಾತ್ರ. ಅಲ್ಲಾಹನು ಕುರ್‌ಆನಿನ 13ನೇ ಅಧ್ಯಾಯ 14ನೇ ಸೂಕ್ತದಲ್ಲಿ ಈ ರೀತಿ ಹೇಳುತ್ತಾನೆ:

"ಯಥಾರ್ಥ ಪ್ರಾರ್ಥನೆ ಆತನಿಗೆ ಮಾತ್ರ ಇರುವಂತಹದ್ದು. ಆತನ ಹೊರತು ಅವರು ಯಾರು ಯಾರಲ್ಲಿ ಮೊರೆಯಿಡುತ್ತಾರೋ ಅವರು ಯಾವುದಕ್ಕೂ ಉತ್ತರ ಕೊಡಲಾರರು. ಅವರ ಪರಿಸ್ಥಿತಿಯು ತನ್ನಷ್ಟಕ್ಕೆ ನೀರು ಬಾಯಿಗೆ ಮುಟ್ಟಲಿ ಎಂದು ದೂರದಿಂದಲೇ ನೀರಿಗೆ ಕೈಚಾಚಿದವನಂತಿದೆ. ಅವನ ಬಾಯಿಗಂತೂ ಅದು ಮುಟ್ಟಲಾರದು. ಸತ್ಯನಿಷೇಧಿಗಳ ಪ್ರಾರ್ಥನೆಯು ಗುರಿತಪ್ಪಿರುತ್ತದೆ."

ಬಯಕೆಗಳನ್ನು ಈಡೇರಿಸುವ ಸಾಮರ್ಥ್ಯ, ಕಾರ್ಯಗಳನ್ನು ಸುಗಮಗೊಳಿಸುವ ಅಧಿಕಾರ ಅಲ್ಲಾಹನಲ್ಲಿಯೇ ಇದೆ. ಅವನ ಹೊರತು ಯಾರಿಗೂ ಅಧಿಕಾರ ಇಲ್ಲ. ಪ್ರಾರ್ಥನೆಗೆ ಉತ್ತರ ನೀಡುವವನು ಅಲ್ಲಾಹನಾಗಿದ್ದಾನೆ. ಅವನ ಹೊರತು ಬೇರಾರೂ ಇಲ್ಲ. ಅಲ್ಲಾಹನು ಹೇಳುತ್ತಾನೆ.

"ಓ ಮನುಷ್ಯರೇ, ನೀವು ಅಲ್ಲಾಹನನ್ನು ಅವಲಂಬಿತರಾಗಿರುತ್ತೀರಿ. ಅಲ್ಲಾಹನಾದರೋ ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ." (35:15)

ಅಲ್ಲಾಹನು ಈ ರೀತಿ ಹೇಳಿರುವುದಾಗಿ ಪ್ರವಾದಿ(ﷺ) ಯವರು ಹೇಳುತ್ತಾರೆ:

"ಓ ನನ್ನ ದಾಸರೇ, ನಾನು ಅಕ್ರಮವನ್ನು ನಿಷಿದ್ಧಗೊಳಿಸಿದ್ದೇನೆ. ಆದುದರಿಂದ ನೀವು ಪರಸ್ಪರ ಅಕ್ರಮವೆಸಗದಿರಿ. ಓ ನನ್ನ ದಾಸರೇ, ನಾನು ಮಾರ್ಗದರ್ಶನ ಮಾಡಿ-

ದವರ ಹೊರತು ಉಳಿದವರು ಪಥಭ್ರಷ್ಟತೆಯಲ್ಲಿದ್ದೀರಿ. ಆದ್ದರಿಂದ ಮಾರ್ಗದರ್ಶನಕ್ಕಾಗಿ ನನ್ನೊಂದಿಗೆ ಬೇಡಿರಿ. ನಾನು ನಿಮಗೆ ಮಾರ್ಗದರ್ಶನವನ್ನು ನೀಡುವೆನು. ಓ ನನ್ನ ದಾಸರೇ, ನಾನು ಉಣಿಸಿದವರ ಹೊರತು ನೀವೆಲ್ಲರೂ ಹಸಿದವರಾಗಿದ್ದೀರಿ. ಆದ್ದರಿಂದ ಆಹಾರಕ್ಕಾಗಿ ನನ್ನೊಂದಿಗೆ ಪ್ರಾರ್ಥಿಸಿರಿ. ನಾನು ನಿಮಗೆ ಆಹಾರ ನೀಡುವೆನು. ಓ ನನ್ನ ದಾಸರೇ, ನಾನು ಬಟ್ಟೆ ತೊಡಿಸಿದವರ ಹೊರತು ಉಳಿದವರೆಲ್ಲರೂ ನಗ್ನರಾಗಿದ್ದೀರಿ. ನೀವು ಬಟ್ಟೆಗಾಗಿ ನನ್ನೊಂದಿಗೆ ಬೇಡಿರಿ. ನಾನು ನಿಮಗೆ ತೊಡಿಸುವೆನು. ಓ ನನ್ನ ದಾಸರೇ, ನೀವು ರಾತ್ರಿ ಹಗಲಲ್ಲೂ ಪಾಪಗಳನ್ನೆಸಗುತ್ತೀರಿ. ಪಾಪ ವಿಮೋಚನೆಗಾಗಿ ನನ್ನೊಂದಿಗೆ ಪ್ರಾರ್ಥಿಸಿರಿ. ನಾನು ನಿಮ್ಮ ಪಾಪಗಳನ್ನು ಮನ್ನಿಸುವೆನು." (ಮುಸ್ಲಿಂ)

ಪ್ರವಾದಿ(ﷺ) ಇನ್ನೊಂದು ಸಂದರ್ಭದಲ್ಲಿ ಈ ರೀತಿ ಹೇಳುತ್ತಾರೆ. "ಮನುಷ್ಯನು ತನ್ನ ಸಣ್ಣಪುಟ್ಟ ಬಯಕೆಗಳಿಗೂ

ಅಲ್ಲಾಹನಲ್ಲೇ ಮೊರೆ ಇಡಬೇಕು. ಎಷ್ಟರವರೆಗೆಂದರೆ ತನ್ನ ಪಾದರಕ್ಷೆಯ ಅಟ್ಟೆ ತುಂಡಾದರೂ ಕೂಡ ಮತ್ತು ಉಪ್ಪಿನ ಅಗತ್ಯವಿದ್ದರೂ ಕೂಡ." (ತಿರ್ಮುದಿ)

ಅತ್ಯಂತ ಸಣ್ಣ ಬೇಡಿಕೆಗಳನ್ನು ಪೂರೈಸುವವನು, ನಮ್ಮ ಪ್ರಾರ್ಥನೆಗಳನ್ನು ಆಲಿಸುವವನು, ನಮ್ಮ ಆಸೆ-ಆಕಾಂಕ್ಷೆ-ಗಳನ್ನು ಈಡೇರಿಸುವವನು ಬೇರೆ ಯಾರೂ ಇಲ್ಲ (ಅವನ ಹೊರತು).

ಪ್ರಾರ್ಥನೆ ನಿರ್ಮಲವಾಗಿರಬೇಕು:

ಧರ್ಮಬದ್ಧವೂ, ಶುದ್ಧವಾದುದನ್ನೇ ನಾವು ಬೇಡಬೇಕು. ದುರುದ್ದೇಶಕ್ಕಾಗಿ, ಪಾಪಕಾರ್ಯಗಳಿಗಾಗಿ ನಾವು ಅಲ್ಲಾಹನೊಂದಿಗೆ ಪ್ರಾರ್ಥಿಸುವುದು ಅಸಭ್ಯ, ಅಶ್ಲೀಲ ಹಾಗೂ ಅಗೌರವದ ಕೃತ್ಯವಾಗಿದೆ. ಅದೇ ರೀತಿ ಹರಾಂ ಹಾಗೂ ನಿಷಿದ್ಧ ಉದ್ದೇಶಕ್ಕಾಗಿ ಪ್ರಾರ್ಥಿಸುವುದು, ಹರಕೆ ನೀಡುವುದು ಧರ್ಮದೊಂದಿಗೆ ಮಾಡುವ ಪರಿಹಾ-

ಸ್ಯವಾಗಿದೆ. ಇನ್ನು ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಪ್ರಾರ್ಥಿಸಬಾರದು. ಇದರಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಉದಾಹರಣೆಗೆ, ಕುಳ್ಳ ವ್ಯಕ್ತಿ ತಾನು ನೀಳಕಾಯನಾಗಲು ಪ್ರಾರ್ಥಿಸುವುದು, ಅದೇ ರೀತಿ ಒಬ್ಬ ನೀಳಕಾಯ ವ್ಯಕ್ತಿ ತಾನು ಸ್ವಲ್ಪ ಕುಳ್ಳನಾಗಬೇಕೆಂದು ಪ್ರಾರ್ಥಿಸುವುದು. ನಾನು ಯಾವಾಗಲೂ ಯುವಕನಾಗಿರಬೇಕು, ಮುದಿತನವೆಂಬುದು ಬರಬಾರದು. ಈ ರೀತಿ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಪ್ರಾರ್ಥಿಸಬಾರದು. ಅದರಲ್ಲಿ ಯಾವುದೇ ಬದಲಾವಣೆಯಾಗದು.

(ಓ ಪೈಗಂಬರರೇ ಇವರೊಡನೆ ಹೇಳಿರಿ)...."ನನ್ನ ಪ್ರಭು ನ್ಯಾಯಪರ ಆಜ್ಞೆಯನ್ನಿತ್ತಿದ್ದಾನೆ. ಪ್ರತಿಯೊಂದು ಉಪಾಸನೆಯಲ್ಲಿ ಗಮನವನ್ನು ಸರಿಯಾಗಿಸಬೇಕೆಂದೂ, ಧರ್ಮವನ್ನು ಅವನಿಗೆ ಮೀಸಲಾಗಿಟ್ಟು ಅವನನ್ನೇ ಕೂಗಿ ಕರೆಯಬೇಕೆಂದೂ ಅವನ ಆಜ್ಞೆಯಾಗಿರುತ್ತದೆ."

ಅಲ್ಲಾಹನ ಮುಂದೆ ತನ್ನ ಬೇಡಿಕೆಗಳನ್ನು ಇರಿಸದವನು

ಧಿಕ್ಕಾರ ಮಾರ್ಗದಲ್ಲಿ ನಡೆಯುವವನಾಗಿದ್ದು ನಿಷಿದ್ಧ ಬೇಡಿಕೆಗಳಿಗಾಗಿ ಪ್ರಾರ್ಥಿಸಬಾರದು. ಸಚ್ಚಾರಿತ್ರ್ಯವಂತನಾಗಿ ಒಳ್ಳೆಯ ಭಾವನೆಗಳೊಂದಿಗೆ ಸದುದ್ದೇಶಗಳ ಈಡೇರಿಕೆಗಾಗಿ ಪ್ರಾರ್ಥಿಸಬೇಕು.

ಯಾವ ರೀತಿ ಪ್ರಾರ್ಥಿಸಬೇಕು:

ನಿಷ್ಕಳಂಕ ಮತ್ತು ಪರಿಶುದ್ಧ ಉದ್ದೇಶದೊಂದಿಗೆ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು. ಮಾತ್ರವಲ್ಲ ಆತನು ನಮ್ಮ ಮನದಿಂಗಿತವನ್ನು ಅರಿಯುವನಾಗಿದ್ದಾನೆ. ನಮ್ಮ ಮೇಲೆ ಅತ್ಯಧಿಕ ಕರುಣೆ ತೋರುವನಾಗಿದ್ದಾನೆ. ನಮ್ಮ ಪ್ರಾರ್ಥನೆಯನ್ನು ಆಲಿಸುವವನೂ, ನಮ್ಮ ಆಸೆ-ಆಕಾಂಕ್ಷೆಗಳನ್ನು ಈಡೇರಿಸುವನಾಗಿದ್ದಾನೆ ಎಂಬ ದೃಢ ನಂಬಿಕೆಯೊಂದಿಗೆ ಪ್ರಾರ್ಥಿಸಬೇಕು. ಕಾಪಟ್ಯ, ಬಹುದೇವಾರಾಧನೆ, ಆಡಂಬರದಿಂದ ನಾವು ನಮ್ಮ ಪ್ರಾರ್ಥನೆಯನ್ನು ಮುಕ್ತಗೊಳಿಸಿ ಪಾವನವಾಗಿರಿಸಬೇಕು.

ಅಲ್ಲಾಹನು ಹೇಳುತ್ತಾನೆ: "ಆದ್ದರಿಂದ ಅನುಸರಣೆಯಲ್ಲಿ ಅಲ್ಲಾಹನಿಗೆ ಏಕನಿಷ್ಠರಾಗಿ ಅವನನ್ನೇ ಕರೆದು ಪ್ರಾರ್ಥಿ- ಸಿರಿ." (40:14)

ಇನ್ನೊಂದು ಸ್ಥಳದಲ್ಲಿ ಈ ರೀತಿ ಹೇಳುತ್ತಾನೆ: "ಪ್ರವಾ- ದಿಯವರೇ, ನನ್ನ ದಾಸರು ನನ್ನ ಬಗ್ಗೆ ನಿಮ್ಮಲ್ಲಿ ವಿಚಾ- ರಿಸಿದರೆ, ಹೇಳಿರಿ, ನಾನು ಸಮೀಪದಲ್ಲೇ ಇದ್ದೇನೆ. ಪ್ರಾ- ರ್ಥಿಸುವವನು ನನ್ನನ್ನು ಕರೆದು ಪ್ರಾರ್ಥಿಸಿದರೆ ನಾನು ಆ ಪ್ರಾರ್ಥನೆಗೆ ಉತ್ತರ ನೀಡುವೆನು. ಆದ್ದರಿಂದ ಅವರು ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ವಿಶ್ವಾಸವಿ- ಡಲಿ. ಈ ರೀತಿ ಅವರು ಸನ್ಮಾರ್ಗ ಪಡೆಯಬಹುದು." (2:186)

ಪ್ರಾರ್ಥನೆಗಳಲ್ಲಿ ಪೂರ್ಣ ಗಮನ ಹರಿಸಬೇಕು. ಏಕಾ- ಗ್ರತೆ ಮತ್ತು ಮನದಾಳದಿಂದ ಶುಭ ನಿರೀಕ್ಷೆಗಳೊಂದಿಗೆ ಪ್ರಾರ್ಥಿಸಬೇಕು. ನಾವು ನಮ್ಮ ಪಾಪಗಳ ರಾಶಿಯತ್ತ ದೃಷ್ಟಿ ಇಡದೆ, ಅಲ್ಲಾಹನ ಅಪಾರ ಅನುಗ್ರಹ, ಕ್ಷಮಾ-

ಶೀಲತೆ, ಕರುಣೆ, ದಯಾದೀಕ್ಷೆಯತ್ತಲೇ ಗಮನಹರಿಸ-ಬೇಕು. ಶುಭ ನಿರೀಕ್ಷೆಯಿಡದೆ, ಏಕಾಗ್ರತೆ ಇಲ್ಲದೆ, ಒಲ್ಲದ ಮನಸ್ಸಿನೊಂದಿಗೆ ಪ್ರಾರ್ಥಿಸುವುದಾದರೆ ಅದು ಪ್ರಾ-ರ್ಥನೆಯಲ್ಲ, ನಿಮ್ಮ ಬಾಯಿಂದ ಹೊರಡುವ ನಿರರ್ಥಕ ಚೀತ್ಕಾರಗಳಾಗಿವೆ ಎಂದು ಈ ಕೆಳಗಿನ ಹದೀಸಿನಿಂದ ನಾವು ಮನಗಾಣಬಹುದು. ಇಂತಹ ಪ್ರಾರ್ಥನೆಯನ್ನು ಅಲ್ಲಾಹು ಸ್ವೀಕರಿಸುವುದೇ ಇಲ್ಲ.

ಪ್ರವಾದಿ(ﷺ) ಯವರು ಹೇಳುತ್ತಾರೆ: "ಉತ್ತರ ಲಭಿಸು-ತ್ತದೆ ಎಂಬ ಧೃಡ ವಿಶ್ವಾಸದೊಂದಿಗೆ ನೀವು ಅಲ್ಲಾಹ-ನೊಂದಿಗೆ ಪ್ರಾರ್ಥಿಸಿರಿ. ಅಲಕ್ಷ್ಯ ಮತ್ತು ನಿರ್ಲಕ್ಷ್ಯ ಮನ-ಸ್ಸಿನೊಂದಿಗೆ ಮಾಡಿದ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ."

ಅತ್ಯಂತ ದೈನ್ಯತೆ ಮತ್ತು ಭಯ ಭಕ್ತಿಯೊಂದಿಗೆ ಪ್ರಾರ್ಥಿ-ಸಬೇಕು. ನಮ್ಮ ಮನದಲ್ಲಿ ಧರ್ಮನಿಷ್ಠೆ, ದೇವಭಯದ ಭಾವ ತುಂಬಿ ಆತನ ಭಯದಿಂದ ಮೈನಡುಗುತ್ತಿರಬೇ-

ಕು. ತಲೆ ಮತ್ತು ದೃಷ್ಟಿ ತಗ್ಗಿರಬೇಕು, ಧ್ವನಿ ಮೆದುವಾಗಿರಬೇಕು. ಶರೀರದ ಅವಯವ ಸಡಿಲವಾಗಿರಬೇಕು. ಕಣ್ಣುಗಳಲ್ಲಿ ಅಶ್ರು ತುಂಬಿರಬೇಕು. ಎಲ್ಲ ಅವಯವಗಳಿಂದ ದೈನ್ಯತೆ ಮತ್ತು ಅಸಹಾಯಕತೆ ವ್ಯಕ್ತವಾಗಬೇಕು. ವಾಸ್ತವದಲ್ಲಿ ಪ್ರಾರ್ಥನೆ ಮಾಡುವಾಗ ನಾನೊಬ್ಬ ದೀನ, ಅಸಹಾಯಕ ವ್ಯಕ್ತಿ, ಆಕಸ್ಮಾತ್ ಅಲ್ಲಾಹನ ಆಸ್ಥಾನದಿಂದ ತಿರಸ್ಕರಿಸಲ್ಪಟ್ಟರೆ ನನ್ನ ಬಳಿ ನನ್ನದೆಂಬ ಆಶ್ರಯ ಯಾವುದೂ ಇಲ್ಲ. ಎಲ್ಲವೂ ಅಲ್ಲಾಹನ ಕೊಡುಗೆ. ಅವನು ಕೊಡದಿದ್ದರೆ ಅದನ್ನು ಕೊಡುವವರು ಜಗತ್ತಿನಲ್ಲಿ ಯಾರೂ ಇಲ್ಲ. ಎಲ್ಲಾ ವಸ್ತುಗಳ ಒಡೆಯನು ಅವನೇ. ಆತನ ಬಳಿ ಎಲ್ಲಾ ವಸ್ತುಗಳ ನಿಧಿ ಇದೆ. ನಾನು ತೀರಾ ಅಸಹಾಯಕ ಹಾಗೂ ನಿರಾಶ್ರಿತನಾಗಿರುವೆನೆಂಬ ಭಾವನೆಯಲ್ಲಿ ಮೈಯಲ್ಲಿ ನಡುಕ ಹುಟ್ಟಬೇಕು. ಭಯದೊಂದಿಗೆ ಪ್ರಾರ್ಥಿಸುತ್ತಿರಬೇಕು.

ಅಲ್ಲಾಹನ ಹೇಳುತ್ತಾನೆ: “ನಿಮ್ಮ ಪ್ರಭುವನ್ನು ಭಯ ವಿನ-

ಯದೊಂದಿಗೆ ಮತ್ತು ರಹಸ್ಯವಾಗಿ ಪ್ರಾರ್ಥಿಸಿರಿ." (7:55)

ಪ್ರವಾದಿಗಳ ಪ್ರಾರ್ಥನೆ ಈ ರೀತಿಯಾಗಿತ್ತೆಂದು ಅಲ್ಲಾಹನು ಕುರ್‌ಆನಿನಲ್ಲಿ ಹೇಳಿದ್ದಾನೆ. "ಮತ್ತು ಹಂಬಲದಿಂದ ಹಾಗೂ ಭಯದಿಂದ ನಮ್ಮೊಂದಿಗೆ ಪ್ರಾರ್ಥಿಸುವವರಾಗಿದ್ದಾರೆ." (21:90)

ನನ್ನ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುತ್ತಾನೆ ಎಂಬ ದೃಢ ವಿಶ್ವಾಸದೊಂದಿಗೆ ಪ್ರಾರ್ಥಿಸಬೇಕು. ಪ್ರಾರ್ಥನೆಯನ್ನು ಸ್ವೀಕರಿಸದಿದ್ದರೆ ನನ್ನ ಪರಿಸ್ಥಿತಿ ಏನಾದೀತು ಎಂಬ ಭಯದೊಂದಿಗೆ ಪ್ರಾರ್ಥಿಸಬೇಕು ಎಂಬುದಾಗಿದೆ ಈ ವಚನದ ತಾತ್ಪರ್ಯ.

ಪ್ರಾರ್ಥಿಸಲು ಆರಂಭಿಸುವಾಗ ಮೊದಲು ಅಲ್ಲಾಹನನ್ನು ಸ್ತುತಿಸಬೇಕು. ಎರಡು ರಕಅತ್ ಐಚ್ಛಿಕ ನಮಾಝ್ ಮಾಡಬೇಕು. ದುಆದ ಆರಂಭ ಮತ್ತು ಕೊನೆಯು ಪ್ರವಾದಿ(ﷺ) ರ ಸ್ವಲಾತ್‌ನೊಂದಿಗಾಗಿರಬೇಕು.

ಫುದಾಲ ಇಬ್ನ್ ಉಬೈದ್(ﷺ) ರಿಂದ ವರದಿ. "ಒಬ್ಬ ವ್ಯಕ್ತಿ ನಮಾಜಿನಲ್ಲಿ ಪ್ರಾರ್ಥಿಸುತ್ತಿರುವುದನ್ನು ಪ್ರವಾದಿ (ﷺ) ಯವರು ಆಲಿಸಿದರು. ಅವನು ಅಲ್ಲಾಹನನ್ನು ಸ್ತುತಿಸಲಿಲ್ಲ ಮತ್ತು ಪ್ರಶಂಸಿಸಲಿಲ್ಲ ಹಾಗೂ ಪ್ರವಾದಿ (ﷺ) ಯವರ ಮೇಲೆ ಸಲಾತನ್ನು ಹೇಳಲಿಲ್ಲ.

ಪ್ರವಾದಿ(ﷺ) ಯವರು ಹೇಳಿದರು: "ಇವನು ಆತುರ ಪಟ್ಟಿದ್ದಾನೆ." ನಂತರ ಆ ವ್ಯಕ್ತಿಯನ್ನು ಕರೆದು ಅವನೊಂದಿಗೆ ಹಾಗೂ ಇತರರೊಂದಿಗೆ ಹೇಳಿದರು: "ನಿಮ್ಮಲ್ಲೊಬ್ಬನು ಪ್ರಾರ್ಥಿಸುವುದಾದರೆ ಅಲ್ಲಾಹನ ಸ್ತುತಿಯೊಂದಿಗೆ ಮತ್ತು ಅವನ ಪ್ರಶಂಸೆಯೊಂದಿಗೆ ಆರಂಭಿಸಲಿ. ನಂತರ ಅವನು ಪ್ರವಾದಿ(ﷺ) ಯವರ ಮೇಲೆ ಸ್ವಲಾತ್ ಹೇಳಲಿ. ಅದರ ನಂತರ ಅವನು ತಾನು ಇಚ್ಛಿಸಿದ್ದನ್ನು ಪ್ರಾರ್ಥಿಸಲಿ."

ಸದುದ್ದೇಶಕ್ಕಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುವುದರೊಂದಿಗೆ ಜೀವನವನ್ನು ದೇವಾದೇಶದಂತೆ ರೂಪಿಸಿ ಸುಧಾರಣೆ

ಮಾಡುವ ಪ್ರಯತ್ನ ಮಾಡಬೇಕು. ಪಾಪಕೃತ್ಯ, ನಿಷಿದ್ಧ-
ಕಾರ್ಯಗಳಿಂದ ಸಂಪೂರ್ಣವಾಗಿ ದೂರವಿರಬೇಕು.
ಧರ್ಮನಿಷ್ಠೆಯ ಜೀವನವನ್ನು ಸಾಗಿಸಬೇಕು. ನಿಷಿದ್ಧ
ಸಂಪಾದನೆಯಿಂದ ತಿಂದು, ನಿಷಿದ್ಧ ಸಂಪಾದನೆಯಿಂದ
ಕುಡಿದು, ನಿಷಿದ್ಧ ಸಂಪಾದನೆಯಿಂದ ಬಟ್ಟೆ ಹಾಗೂ ತನ್ನ
ದೇಹವನ್ನು ಬೆಳೆಸಿದವನು ಪ್ರಾರ್ಥಿಸಿದರೆ ಆ ಪ್ರಾರ್ಥನೆ-
ಯನ್ನು ಅಲ್ಲಾಹು ಸ್ವೀಕರಿಸುತ್ತಾನೆ ಎಂದು ಭಾವಿಸುವು-
ದು ತಿಳಿಗೇಡಿತನ. ಪ್ರಾರ್ಥನೆ ಸ್ವೀಕಾರವಾಗಬೇಕಾದರೆ
ಮನುಷ್ಯನ ನಡೆ-ನುಡಿ ಧರ್ಮದ ಆದೇಶ ಪ್ರಕಾರ ಇರ-
ಬೇಕಾದುದು ಅತ್ಯಗತ್ಯ.

ಪ್ರವಾದಿ(ﷺ) ಯವರ ಈ ಹದೀಸನ್ನು ಪರಿಶೀಲಿಸೋಣ.

ಅಬೂಹುರೈರಾ(رضي الله عنه) ರಿಂದ ವರದಿ.ಪ್ರವಾದಿ(ﷺ)
ಯವರು ಹೇಳಿದರು: "ಓ ಜನರೇ, ಅಲ್ಲಾಹು ಪರಿಶುದ್ಧ-
ನು ಮತ್ತು ಪರಿಶುದ್ಧವಾದುದನ್ನು ಮಾತ್ರ ಸ್ವೀಕರಿಸುತ್ತಾನೆ.
ಅಲ್ಲಾಹು ಸಂದೇಶವಾಹಕರಿಗೆ ಏನನ್ನು ಆದೇಶಿಸಿದ್ದಾ-

ನೋ ಅದನ್ನೇ ವಿಶ್ವಾಸಿಗಳಿಗೆ ಆದೇಶಿಸಿದ್ದಾನೆ. (ನಂತರ 23ನೇ ಅಧ್ಯಾಯದ 51ನೇ ಆಯತ್ತನ್ನು ಪಠಿಸುತ್ತಾರೆ) "ಓ ಪ್ರವಾದಿಗಳೇ, ಶುದ್ಧ ಆಹಾರವನ್ನು ಸೇವಿಸಿರಿ ಮತ್ತು ಸತ್ಕರ್ಮ ಕೈಗೊಳ್ಳಿರಿ." ನಂತರ ಪ್ರವಾದಿ(ﷺ) ಯವರು ಸತ್ಯವಿಶ್ವಾಸಿಗಳನ್ನುದ್ದೇಶಿಸಿ ಅಲ್ಲಾಹು ಹೀಗೆ ಹೇಳಿರುವ-ನು ಎನ್ನುತ್ತಾ, 2ನೇ ಅಧ್ಯಾಯದ 172ನೇ ಸೂಕ್ತವನ್ನು ಓದುತ್ತಾರೆ. "ಓ ಸತ್ಯ ವಿಶ್ವಾಸಿಗಳೇ, ನಾವು ನೀಡಿರುವ ಅನ್ನಾಧಾರಗಳಿಂದ ಶುದ್ಧವಾದುದನ್ನೇ ತಿನ್ನಿರಿ."

ನಂತರ ಪ್ರವಾದಿ(ﷺ) ಯವರು ದೀರ್ಘ ಯಾತ್ರೆ ಮಾಡಿದ ಕೆದರಿದ ಕೂದಲಿನ ಧೂಳಿನಿಂದಾವೃತ-ವಾದ ವ್ಯಕ್ತಿಯೊಬ್ಬನನ್ನು ಪ್ರಸ್ತಾಪಿಸಿದರು. ಅವನು ಆಕಾಶದ ಕಡೆಗೆ ಕೈಗಳನ್ನು ಚಾಚಿ "ಓ ನನ್ನ ಪ್ರಭೂ, ಓ ನನ್ನ ಪ್ರಭೂ" ಎನ್ನುತ್ತಿದ್ದಾನೆ. ಅವನ ಆಹಾರವೂ ಹರಾಮ್, ಅವನು ಉಟ್ಟ ಬಟ್ಟೆಯೂ ಹರಾಮ್ ಆಗಿದೆ. ಅವನು ಹರಾಮಿನಿಂದ ತನ್ನ ದೇಹವನ್ನು ಬೆಳೆಸಿದ್ದಾನೆ.

ಅವನ ಪ್ರಾರ್ಥನೆಗೆ ಉತ್ತರ ಸಿಗುವುದಾದರೂ ಹೇಗೆ?" (ಮುಸ್ಲಿಂ, ತಿರ್ಮುದಿ, ಅಹ್ಮದ್)

ಪ್ರಾರ್ಥಿಸುವುದಕ್ಕಿಂತ ಮುಂಚೆ ಏನಾದರೂ ಸತ್ಕಾರ್ಯವನ್ನು ತಪ್ಪದೇ ಮಾಡಬೇಕು. ಉದಾಹರಣೆಗೆ, ದಾನ–ಧರ್ಮ, ಹಸಿದವರಿಗೆ ಉಣಿಸುವುದು, ಸುನ್ನತ್ ನಮಾಝ್, ಉಪವಾಸ ಇತ್ಯಾದಿ. ದುರದೃಷ್ಟವಶಾತ್ ನಾವು ಸಂಕಷ್ಟದಲ್ಲಿ ಬಿದ್ದರೆ ಇಂತಹ ಸತ್ಕರ್ಮಗಳನ್ನು ಉಲ್ಲೇಖಿಸಿ ಪ್ರಾರ್ಥಿಸಿದರೆ ಅಲ್ಲಾಹು ಪ್ರಾರ್ಥನೆಯನ್ನು ಸ್ವೀಕರಿಸುತ್ತಾನೆ. ಸತ್ಕರ್ಮವು ಅಲ್ಲಾಹನ ಸಂಪ್ರೀತಿಗೆ ಪಾತ್ರವಾಗುತ್ತದೆ.

"ಆತನ ಕಡೆಗೆ ಏರುವ ವಸ್ತು ಪವಿತ್ರ ವಚನ ಮಾತ್ರವಾಗಿದೆ. ಸತ್ಕರ್ಮವು ಅದನ್ನು ಮೇಲೇರಿಸುತ್ತದೆ." (35:10)

ಕತ್ತಲೆಯ ರಾತ್ರಿಯಲ್ಲಿ ಗುಹೆಯಲ್ಲಿ ಸಿಲುಕಿಕೊಂಡ ಮೂವರ ವೃತ್ತಾಂತವನ್ನು ಪ್ರವಾದಿ(ﷺ) ಯವರು

ನಮಗೆ ವಿವರಿಸುತ್ತಾರೆ. ಅವರು ತಮ್ಮ ಪ್ರಾಮಾಣಿಕ ಸತ್ಕರ್ಮಗಳನ್ನು ಅಲ್ಲಾಹನ ಮುಂದೆ ಉಲ್ಲೇಖಿಸಿ ಪ್ರಾರ್ಥಿಸಿದಾಗ ಅಲ್ಲಾಹು ಅವರನ್ನು ಸಂಕಷ್ಟದಿಂದ ಪಾರು ಮಾಡಿದನು.

ಘಟನೆ ಹೀಗಿದೆ: ಮೂವರು ಸ್ನೇಹಿತರು ಒಂದು ಗುಹೆಯಲ್ಲಿ ಆಶ್ರಯ ಪಡೆದರು. ಪರ್ವತದಿಂದ ಒಂದು ಬಂಡೆ ಉರುಳಿ ಬಂದು ಆಕಸ್ಮಾತ್ ಅವರ ಗುಹೆಯ ಬಾಗಿಲಲ್ಲಿ ಬಿದ್ದು ಬಾಗಿಲು ಮುಚ್ಚಿ ಹೋಯಿತು. ಅದನ್ನು ಸರಿಸಿ ಗುಹೆಯಿಂದ ಹೊರಬರುವುದು ಅಸಾಧ್ಯವಾಗಿತ್ತು. ಆಗ ಅವರು ಪರಸ್ಪರ ಸಮಾಲೋಚನೆ ಮಾಡಿ ತಮ್ಮ ತಮ್ಮ ಜೀವನದಲ್ಲಿ ಮಾಡಿದ ಅತ್ಯುತ್ತಮ ಸತ್ಕರ್ಮವನ್ನು ಉಲ್ಲೇಖಿಸಿ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು ಎಂದು ತೀರ್ಮಾನ ಮಾಡಿದರು. ಅವರಲ್ಲೊಬ್ಬರು ಈ ರೀತಿ ಪ್ರಾರ್ಥಿಸಿದರು. “ ನಾನು ಕಾಡಿನಲ್ಲಿ ಕುರಿ ಮೇಯಿಸುತ್ತಿದ್ದೆ. ಅದು ನನ್ನ ಕಸುಬಾಗಿತ್ತು. ನಾನು ಕಾಡಿನಿಂದ ಮರಳಿದಾಗ

ಮೊದಲು ನನ್ನ ವೃದ್ಧ ತಂದೆತಾಯಿಗಳಿಬ್ಬರೂ ಮಲಗಿದ್ದರು. ಮಕ್ಕಳು ಎಚ್ಚರವಾಗಿದ್ದರು. ಹಸಿವಿನಿಂದ ಬಳಲಿದ್ದರು. ಆದರೆ ತಂದೆ-ತಾಯಿಗಿಂತ ಮುಂಚೆ ಮಕ್ಕಳಿಗೆ ಹಾಲು ಕುಡಿಸಲು ನನ್ನ ಮನಸ್ಸು ಒಪ್ಪಲಿಲ್ಲ. ಅಂತೆಯೇ ತಂದೆ-ತಾಯಿಯನ್ನು ಎಬ್ಬಿಸಿ ಅವರಿಗೆ ತೊಂದರೆ ಕೊಡಲು ಮನಸ್ಸು ಬರಲಿಲ್ಲ. ಆದ್ದರಿಂದ ರಾತ್ರಿಪೂರ್ತಿ ನಾನು ಹಾಲಿನ ಪಾತ್ರೆಯನ್ನು ಹಿಡಿದು ಅವರ ಬಳಿ ನಿಂತೆ. ಮಕ್ಕಳು ನನ್ನ ಕಾಲಿಗೆ ಬಿದ್ದು ರೋದಿಸುತ್ತಿದ್ದರು. ಆದರೆ ನಾನು ಬೆಳಗಾಗುವ ತನಕ ಅದೇ ರೀತಿ ನಿಂತಿದ್ದೆ. ಓ ಅಲ್ಲಾಹ್, ನಾನು ಈ ಸತ್ಕರ್ಮವನ್ನು ಕೇವಲ ನಿನ್ನ ಸಂಪ್ರೀತಿಗಾಗಿ ಮಾಡಿದ್ದೆ. ನೀನು ಆ ಸತ್ಕರ್ಮದ ಫಲವಾಗಿ ಬಾಗಿಲ ಬಳಿ ಇರುವ ಬಂಡೆಯನ್ನು ಸರಿಸು. ಆಗ ಆ ಬಂಡೆ ಸ್ವಲ್ಪ ಸರಿಯಿತು. ಒಳಗಿನಿಂದ ಆಕಾಶ ಕಾಣತೊಡಗಿತು.

ಇನ್ನೊಬ್ಬರು ಹೇಳಿದರು: ನಾನು ಕೆಲವು ಆಳುಗ-

ಳಿಂದ ಕೆಲಸ ಮಾಡಿಸಿದೆ. ಅವರೆಲ್ಲರಿಗೂ ಸಂಬಳ ನೀಡಿದೆ. ಆದರೆ ಅವರ ಪೈಕಿ ಒಬ್ಬ ಕಾರ್ಮಿಕ ಸಂಬಳ ಪಡೆಯದೇ ಹೊರಟುಹೋದ. ಕೆಲವು ಕಾಲ ಬಿಟ್ಟು ಆತ ಬಂದು ತನ್ನ ಮಜೂರಿ ಕೇಳಿದಾಗ, "ಈ ದನಕರುಗಳು, ಕುರಿಗಳು, ಆಳುಗಳು ಎಲ್ಲವೂ ನಿನ್ನ ಮಜೂರಿಯಾಗಿ-ದೆ. ಇದನ್ನು ನೀನು ಒಯ್ಯಬಹುದು" ಎಂದು ಹೇಳಿದೆ. ಆಗ ಅವನು, "ಅಲ್ಲಾಹನಿಗಾಗಿ ನನ್ನನ್ನು ತಮಾಷೆ ಮಾಡಬೇಡಿ" ಎಂದು ಹೇಳಿದನು. "ಇದು ತಮಾಷೆ-ಯಲ್ಲ. ನಿಜಕ್ಕೂ ಇದೆಲ್ಲಾ ನಿನ್ನದೇ ಆಗಿದೆ. ನೀನು ಬಿಟ್ಟು ಹೋದ ಮೊತ್ತವನ್ನು ನಾನು ವ್ಯಾಪಾರದಲ್ಲಿ ತೊಡಗಿಸಿದೆ. ಅಲ್ಲಾಹು ಅದರಲ್ಲಿ ಸಮೃದ್ಧಿ ನೀಡಿದನು. ಈಗ ನೀನು ನೋಡುತ್ತಿರುವುದೆಲ್ಲವೂ ಅದರಿಂದಲೇ ಆಗಿದೆ. ನೀನು ಇದನ್ನು ನಿಸ್ಸಂಕೋಚವಾಗಿ ಒಯ್ಯಬಹುದು. ಎಲ್ಲವೂ ನಿನ್ನದು." ಎಂದು ನಾನು ಹೇಳಿದಾಗ ಆ ಕಾರ್ಮಿಕ ಅದೆಲ್ಲವನ್ನು ತೆಗೆದುಕೊಂಡು ಹೋದ. ಓ ಅಲ್ಲಾಹ್,

ನಾನು ಇದನ್ನು ನಿನ್ನ ಸಂಪ್ರೀತಿಗಾಗಿ ಮಾಡಿದ್ದೆ. ಈ ಸತ್ಕರ್ಮದ ಫಲವಾಗಿ ಗುಹೆಯ ಬಂಡೆಯನ್ನು ಸರಿಸು ಎಂದು ಪ್ರಾರ್ಥಿಸಿದರು. ದೇವ ಕೃಪೆಯಿಂದ ಬಂಡೆ ಇನ್ನ-ಷ್ಟು ಸರಿಯಿತು.

ಮೂರನೆಯ ವ್ಯಕ್ತಿ ಹೇಳಿದರು: "ನನಗೆ ಒಬ್ಬ ಚಿಕ್ಕ-ಪ್ಪನ ಮಗಳು ಇದ್ದಳು. ಅವಳ ಮೇಲೆ ನನಗೆ ಎಲ್ಲಿಲ್ಲದ ಮೋಹ. ಅವಳು ನನ್ನಿಂದ ಸ್ವಲ್ಪ ಹಣ ಕೇಳಿದ್ದಳು. ನಾನು ಕೊಟ್ಟೆ. ಹಾಗೂ ನನ್ನ ಕಾಮ ಬಯಕೆಯನ್ನು ತೀರಿಸಲು ಆಕೆಯ ಬಳಿ ಕುಳಿತೆ. ಆಕೆ ಹೇಳಿದಳು, "ದೇವರನ್ನು ಭಯಪಡು. ಈ ಕೆಲಸದಿಂದ ದೂರವಾಗು." ಆಗ ನಾನು ಪಕ್ಕನೆ ಅಲ್ಲಿಂದ ಎದ್ದೆ. ನಾನು ಆ ಹಣವನ್ನು ಅವಳ ಬಳಿ ಬಿಟ್ಟುಬಿಟ್ಟೆ. ಓ ಅಲ್ಲಾಹ್, ನಾನು ಈ ಕಾ-ರ್ಯವನ್ನು ಕೇವಲ ನಿನ್ನ ಸಂಪ್ರೀತಿಗಾಗಿ ಮಾಡಿದೆನು ಎಂಬುದು ನಿನಗೆ ಚೆನ್ನಾಗಿ ಗೊತ್ತು. ಅದರ ಫಲವಾಗಿ ಈ ಗುಹೆಯ ಬಾಗಿಲನ್ನು ತೆರೆದುಬಿಡು" ಎಂದಾಗ

ಅಲ್ಲಾಹನು ಗುಹೆಯ ಬಾಗಿಲಿನಿಂದ ಆ ಬಂಡೆಯನ್ನು ಸರಿಸಿದನು. ಈ ರೀತಿ ಮೂವರನ್ನು ಅಲ್ಲಾಹು ಸಂಕಷ್ಟದಿಂದ ಪಾರು ಮಾಡಿದನು.

ಪ್ರಾರ್ಥಿಸಲು ಎಂದು ಬೇಸರ ಪಡಬಾರದು. ದುಆದಿಂದ ವಿಧಿ ಬದಲಾಗುತ್ತದೋ ಇಲ್ಲವೋ ಎಂದು ಸಂಶಯದಲ್ಲಿ ಇರಬಾರದು. ಪ್ರಾರ್ಥನೆಯನ್ನು ಸ್ವೀಕರಿಸುವುದು ಸ್ವೀಕರಿಸದೆ ಇರುವುದು ಅಲ್ಲಾಹನ ಕೆಲಸ. ಆದರೆ ಸತ್ಯವಿಶ್ವಾಸಿಗಳ ಪ್ರಾರ್ಥನೆಯನ್ನು ಅಲ್ಲಾಹು ಖಂಡಿತವಾಗಿ ಸ್ವೀಕರಿಸುತ್ತಾನೆ ಎಂಬುದಕ್ಕೆ ಈ ಕೆಳಗಿನ ಹದೀಸ್ ಆಧಾರವಾಗಿದೆ.

ಪ್ರವಾದಿ(ﷺ) ಯವರು ಹೇಳಿದರು: "ಒಬ್ಬ ಮುಸಲ್ಮಾನ ಯಾವಾಗ ದೇವನಿಂದ ಪ್ರಾರ್ಥಿಸಲಿಕ್ಕಾಗಿ ತನ್ನ ಮುಖವನ್ನು ಮೇಲೆತ್ತುತ್ತಾನೋ ಆಗ ದೇವನು ಅವನ ಪ್ರಾರ್ಥನೆಯನ್ನು ಖಂಡಿತ ಪೂರೈಸುತ್ತಾನೆ. ಒಂದೋ ಅವನ ಬೇಡಿಕೆ ಈಡೇರುತ್ತದೆ, ಅಥವಾ ಅವನು ಬೇಡಿದ ವಸ್ತು-

ವನ್ನು ಪರಲೋಕದಲ್ಲಿ ಕೊಡುವುದಕ್ಕಾಗಿ ತೆಗೆದಿಡುತ್ತಾನೆ. ನಿರ್ಣಾಯಕ ದಿನದಂದು ಅಲ್ಲಾಹನು ತನ್ನ ದಾಸನನ್ನು ಕರೆದು ಅವನೊಂದಿಗೆ ಈ ರೀತಿ ವಿಚಾರಿಸುವನು. "ಓ ನನ್ನ ದಾಸನೇ, ನಾನು ನಿನಗೆ ಪ್ರಾರ್ಥಿಸಲು ಆಜ್ಞಾಪಿಸಿದ್ದೆ. ಮತ್ತು ನಿನ್ನ ಪ್ರಾರ್ಥನೆಯನ್ನು ನಾನು ಸ್ವೀಕರಿಸುತ್ತೇನೆ ಎಂದು ವಾಗ್ದಾನ ಮಾಡಿದ್ದೆ. ನೀನು ಪ್ರಾರ್ಥಿಸಿದ್ದೀಯಾ?" ದಾಸನು ಹೇಳುವನು, "ಓ ನನ್ನ ಪ್ರಭೂ, ಹೌದು ನಾನು ಪ್ರಾರ್ಥಿಸಿದ್ದೆ." ಆಗ ಅಲ್ಲಾಹು, "ನೀನು ಮಾಡಿದ ಎಲ್ಲಾ ಪ್ರಾರ್ಥನೆಗಳನ್ನೂ ನಾನು ಸ್ವೀಕರಿಸಿದ್ದೆ. ಇಂತಿಂತಹ ದಿನ ನಿನ್ನನ್ನು ಪೀಡಿಸುತ್ತಿದ್ದ ದುಃಖ-ದುಮ್ಮಾನವನ್ನು ದೂರ ಮಾಡಬೇಕೆಂದು ನೀನು ಪ್ರಾರ್ಥಿಸಲಿಲ್ಲವೇ? ಆಗ ನಾನು ನಿನ್ನ ದುಃಖ-ದುಮ್ಮಾನಗಳನ್ನು ದೂರ ಮಾಡಲಿಲ್ಲವೇ? ಎಂದು ಕೇಳುವನು. ಆಗ ದಾಸನು, "ನನ್ನ ಪ್ರಭೂ, ಹೌದು ನಿಜಕ್ಕೂ ದೂರ ಮಾಡಿದೆ" ಎಂದು ಹೇಳುವನು. ಆಗ ಅಲ್ಲಾಹು ಹೇಳುವನು, "ಆ ಪ್ರಾರ್ಥನೆಯನ್ನು ಸ್ವೀ-

ಕರಿಸಿ ಇಹಲೋಕದಲ್ಲೇ ನಿನಗೆ ನಿನ್ನ ಆಸೆಯನ್ನು ಈಡೇರಿಸಿದೆ. ಆದರೆ ಇನ್ನೊಂದು ಸಂದರ್ಭದಲ್ಲಿ ಇನ್ನೊಂದು ದುಃಖದಲ್ಲಿ ನೀನು ಸಿಲುಕಿದಾಗ, ಓ ಅಲ್ಲಾಹ್, ನನ್ನನ್ನು ದುಃಖದಿಂದ ಪಾರು ಮಾಡು ಎಂದು ಪ್ರಾರ್ಥಿಸಿದೆ. ಆದರೆ ನಿನಗೆ ಆ ದುಃಖದಿಂದ ಮುಕ್ತಿ ಸಿಗಲಿಲ್ಲ. ನೀನು ಆ ದುಃಖದಲ್ಲಿ ನಿರಂತರ ಬಳಲುತ್ತಲೇ ಇದ್ದೆ." ಆಗ ದಾಸನು, " ಹೌದು ಪ್ರಭೂ" ಎನ್ನುವನು. ನಾನು ಆ ಪ್ರಾರ್ಥನೆಗೆ ಪ್ರತಿಯಾಗಿ ಸ್ವರ್ಗದಲ್ಲಿ ತರತರಹದ ಅನುಗ್ರಹಗಳನ್ನು ನಿನಗಾಗಿ ಶೇಖರಿಸಿದ್ದೇನೆ. ಇದೇ ರೀತಿ ಇತರ ಬೇಡಿಕೆಗಳ ಬಗ್ಗೆಯೂ ವಿಚಾರಿಸಿ ಹೀಗೆಯೇ ಹೇಳುವನು. ತರುವಾಯ ಪ್ರವಾದಿ(ﷺ) ಯವರು ಹೇಳಿದರು: ಸತ್ಯವಿಶ್ವಾಸಿಯ ಯಾವುದೇ ಪ್ರಾರ್ಥನೆಯ ಬಗ್ಗೆಯೂ ಅಲ್ಲಾಹು ನಾನು ಸ್ವೀಕರಿಸಿದೆ ಮತ್ತು ಪರಲೋಕದಲ್ಲಿ ನಿನಗಾಗಿ ಶೇಖರಿಸಿಟ್ಟೆ ಎಂದು ಹೇಳದೆ ಇರಲಾರನು. ಆಗ ದಾಸನು ಬಯಸುವನು, ನನ್ನ ಯಾವುದೇ ಪ್ರಾ-

ರ್ಥನೆಯೂ ಇಹಲೋಕದಲ್ಲಿ ಸ್ವೀಕಾರವಾಗದಿದ್ದರೆ ಎಷ್ಟು ಚೆನ್ನಾಗಿತ್ತು. ಆದ್ದರಿಂದ ದಾಸನು ಸದಾ ಪ್ರಾರ್ಥಿಸುತ್ತಲೇ ಇರಬೇಕು."

ಪ್ರಾರ್ಥಿಸದವರನ್ನು ಅಲ್ಲಾಹು ಪರಿಗಣಿಸುವುದಿಲ್ಲ

ಪ್ರವಾದಿ ವಚನದಲ್ಲಿ ನೋಡೋಣ.

ಅಬೂ ಹುರೈರ(ﷺ) ರಿಂದ ವರದಿ. " ಯಾರು ಅಲ್ಲಾಹನೊಂದಿಗೆ ಪ್ರಾರ್ಥಿಸುವುದಿಲ್ಲವೋ ಅವನ ಮೇಲೆ ಅಲ್ಲಾಹು ಕೋಪಿಸಿಕೊಳ್ಳುವನು." (ತಿರ್ಮುದಿ)

ಪ್ರಾರ್ಥನೆ ಸ್ವೀಕಾರವಾಗುವ ಸಮಯ

1. ರಾತ್ರಿಯ ಅಂತಿಮ ಆಯಾಮ
2. ಲೈಲತುಲ್ ಕದ್ರ್
3. ಅರಫಾ ಮೈದಾನದಲ್ಲಿ ದುಲ್‌ಹಜ್ ತಿಂಗಳ

9ರಂದು ಅಲ್ಲಾಹನ ಅತಿಥಿಗಳು ಸಮ್ಮೇಳಿಸಿದಾಗ

4. ಖುತುಬಾ ಆರಂಭವಾಗಿ ನಮಾಝ್ ಮುಗಿಯುವ ತನಕ
5. ಆಝಾನ್ ಮತ್ತು ಇಕಾಮತ್‌ನ ಮಧ್ಯೆ
6. ರಮಝಾನ್ ತಿಂಗಳಲ್ಲಿ ವಿಶೇಷವಾಗಿ ಇಫ್ತಾರ್‌ನ ಸಮಯ
7. ಕಡ್ಡಾಯ ನಮಾಝಿನ ನಂತರ
8. ಸುಜೂದಿನಲ್ಲಿ
9. ಅತ್ಯಂತ ದುಃಖ ಮತ್ತು ಸಂಕಷ್ಟದಲ್ಲಿರುವಾಗ
10. ಪವಿತ್ರ ಕುರ್‌ಆನ್ ಪಾರಾಯಣ ಮುಗಿದಾಗ

ನಿರಂತರ ಪ್ರಾರ್ಥಿಸಿರಿ. ಅಲ್ಲಾಹು ಪ್ರಾರ್ಥಿಸುವಂತೆ ಆಜ್ಞಾಪಿಸಿದ್ದಾನೆ. ಅಲ್ಲಾಹನನ್ನು ಕರೆದು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆ ಮತ್ತು ಉತ್ತರಿಸು-ತ್ತೇನೆ ಎಂದು ಅಲ್ಲಾಹು ಹೇಳಿದ್ದಾನೆ.

“ನಿಮ್ಮ ಪ್ರಭು ಹೇಳಿದ್ದಾನೆ, ನನ್ನೊಂದಿಗೆ ಪ್ರಾರ್ಥಿಸಿರಿ

ನಾನು ಉತ್ತರ ನೀಡುತ್ತೇನೆ." (40:60)

ಅಬೂ ಹುರೈರಾ(ರ) ರಿಂದ ವರದಿ. "ಅಲ್ಲಾಹನಿಗೆ ಪ್ರಾರ್ಥನೆಗಿಂತಲೂ ಪ್ರಿಯವಾದ ಬೇರೊಂದು ವಸ್ತು ಇಲ್ಲ." (ತಿರ್ಮುದಿ)

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore